ಉಪಾಧ್ಯಕ್ಷರು: No further clarification. ಅವಕಾಶ ಇಲ್ಲ. ದಯವಿಟ್ಟು ಕುಳಿತುಕೊಳ್ಳಿ. ಗಮನ ಸೆಳೆಯುವುದರಲ್ಲಿ ಇಷ್ಟೇ ಅವಕಾಶ. ತಾವು ಬೇರೆ ರೂಪದಲ್ಲಿ ತನ್ನಿ, ಈಗ ತಾವು ಕುಳಿತುಕೊಳ್ಳಿ.

ಈ) ವಿಷಯ: ರಾಯಚೂರು ಸಮೀಪ ಯರಮರಸ ಮತ್ತು ಯದ್ದಲ್ಲಾಪುರದಲ್ಲಿ ಹೊಸದಾಗಿ 2400 ಮೆಗಾವ್ಯಾಟ್ ಸಾಮರ್ಥ್ಯದ ಶಾಖೊತ್ಪನ್ನ ವಿದ್ಯುತ್ ಯೋಜನೆ ಸ್ಥಾಪಿಸುತ್ತಿರುವ ವಿರುದ್ಧ ಹೋರಾಟದ ಬಗ್ಗೆ

ಶ್ರೀ ನಾಡಗೌಡ ವೆಂಕಟರಾವ್ (ಸಿಂದನೂರು): ಮಾನ್ಯ ಉಪಾಧ್ಯಕ್ಷರೆ, ರಾಯಚೂರು ಸಮೀಪ ಯರಮರಸ ಮತ್ತು ಯದ್ದಲ್ಲಾಪುರದಲ್ಲಿ ಹೊಸದಾಗಿ 2400 ಮೆಗಾವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಯೋಜನೆ ಸ್ಥಾಪಿಸುತ್ತಿರುವ ವಿರುದ್ಧ ಅಲ್ಲಿನ ನಾಗರೀಕ ವೇದಿಕೆ ಹೋರಾಟ ನಡೆಸುತ್ತಿರುವ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು): ಮಾನ್ಯ ಅಧ್ಯಕ್ಷರೇ,

ರಾಯಚೂರಿನಲ್ಲಿ ಹೊಸದಾಗಿ ಪ್ರಾರಂಭಿಸಲಿರುವ 2400 ಮೆ.ವ್ಯಾ. ಸಾಮರ್ಥ್ಯದ ಸೂಪರ್ ಥರ್ಮಲ್ ಪವರ್ ಸ್ಟೇಷನ್ ಬಗ್ಗೆ ಕೆಲವು ವ್ಯಕ್ತಿಗಳು ಹಾಗೂ ಒಂದೆರಡು ಸಂಸ್ಥೆಗಳು ಮತ್ತು ಕೆಲವು ರಾಜಕೀಯ ಸಂಘಟನೆಗಳು ವಿರೋಧ ಮಾಡಿದ್ದು ಸತ್ಯ. ಅದಕ್ಕೆ ತದ್ವಿರುದ್ದವಾಗಿ ಈ ಯೋಜನೆಗಳು ಅಲ್ಲಿ ಬರುವುದು ಅತ್ಯವಶ್ಯವೆಂದೂ ಕೂಡ ಅನೇಕ ಸಂಘ ಸಂಸ್ಥೆಗಳು, ವ್ಯಕ್ತಿಗಳು ಯೋಜನೆಯ ಪರವಾಗಿ ಹೋರಾಟ ಮಾಡಿದ್ದೂ ಕೂಡ ಅಷ್ಟೇ ಸತ್ಯ.

ಸದರಿ ಯೋಜನೆಗೆ ವಿರುದ್ಧ ಅವರು ಮಾಡಿದ ಯಾವುದೇ ಅಪಾದನೆಗಳಲ್ಲಿ ಸತ್ಯಾಂಶವಿಲ್ಲ. ಈ ಬಗ್ಗೆ ವಿವರವಾದ ಮಾಹಿತಿಯನ್ನೊಳಗೊಂಡ 24 ಪುಟಗಳ ಕಿರು ಹೊತ್ತಿಗೆಯ ಮೂಲಕ ಕರ್ನಾಟಕ ವಿದ್ಯುತ್ ನಿಗಮವು ಹತ್ತು ಸಾವಿರಕ್ಕೂ ಮೇಲ್ಪಟ್ಟು ಪ್ರತಿಗಳನ್ನು ದಿನ ಪತ್ರಿಕೆಗಳೊಂದಿಗೆ ಸೇರಿಸಿ ರಾಯಚೂರಿನಲ್ಲಿಯ ಜನರಿಗೆ ತಲುಪಿಸಿದೆ. ಪರಿಸರ ದೋಷಣೆಗೆ ಸಂಬಂಧಿಸಿದಂತೆ ಮಾಡಿದ ಎಲ್ಲಾ ಆಪಾದನೆಗಳನ್ನು ಒಂದೊಂದಾಗಿ ಆ ಕಿರು ಹೊತ್ತಿಗೆಯಲ್ಲಿ ವಿವರಿಸಿ ವಾಸ್ತವ ಸಂಗತಿಗಳನ್ನು ಸಾರ್ವಜನಿಕರ ಗಮನಕ್ಕೆ ತರಲಾಗಿದೆ. ವಾಸ್ತವ ಅಂಶಗಳನ್ನು ಒಪ್ಪದೇ ಬೇರೆ ಉದ್ದೇಶಗಳಿಗಾಗಿ ಕೆಲವು ಜನರು ವಿರೋಧ ಮಾಡುತ್ತಿದ್ದರೂ ಬಹು ಜನರು ಅದಕ್ಕೆ ಪರವಾಗಿದ್ದಾರೆ. ರಾಜ್ಯದ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲಿಕ್ಕೆ ಹಾಗೂ ಕರ್ನಾಟಕದ ಔದ್ಯಮಿಕ ಬೆಳವಣಿಗೆಗೆ ಈ ಕೇಂದ್ರಗಳನ್ನು ಸ್ಥಾಪಿಸುವುದು ಅತ್ಯಾವಶ್ಯವಾಗಿದೆ.

ಉಷ್ಣ ವಿದ್ಯುತ್ ಸ್ಥಾವರಗಳನ್ನು ರಾಯಚೂರಿನಲ್ಲಿ ಸ್ಥಾಪಿಸಲು 25 ವರ್ಷಗಳ ಹಿಂದೆಯೇ ತೀರ್ಮಾನಿಸಲಾಗಿತ್ತು. ಅದಕ್ಕೆ ಮುಖ್ಯ ಕಾರಣವೆಂದರೆ ಅದು ಕೃಷ್ಣ ನದಿಯ ದಂಡೆಯ ಮೇಲಿದ್ದು ಸಾಕಷ್ಟು ನೀರು ಲಭ್ಯವಿದೆ. ಅಷ್ಟೊಂದು ಫಲವತ್ತಿಲ್ಲದ ಸಾಕಷ್ಟು ಜಮೀನು ಅಲ್ಲಿ ಲಭ್ಯವಿದೆ. ರೈಲ್ವೇ ಮಾರ್ಗ ಪಕ್ಕದಲ್ಲಿದೆ. ಹಾಗೂ ಆಂಧ್ರಪ್ರದೇಶದಿಂದ ಬರುವ ಕಲ್ಲಿದ್ದಲನ್ನು ಸಾಗಾಟ ಮಾಡಲು ಬೇರೆ ಜಿಲ್ಲೆಗಳಿಗಿಂತ ರಾಯಚೂರು ಸಮೀಪದಲ್ಲಿದೆ, ಕಲ್ಲಿದ್ದಲು ಸಾಗಾಟದ ಖರ್ಚನ್ನೂ ಈ ಮೂಲಕ ಕಡಿಮೆ ಮಾಡಲಾಗಿದೆ.

ಈಗ ಹೊಸದಾಗಿ ಪ್ರಾರಂಭಿಸುತ್ತಿರುವ ಉಷ್ಣ ವಿದ್ಯುತ್ ಸ್ಥಾವರಗಳಿಗೆ ಕೂಡ ಕೆ.ಐ.ಎ.ಡಿ.ಬಿ. ಯಿಂದ ಲಭ್ಯವಿರುವ 836 ಎಕರೆ ಜಮೀನು ನೀಡಲಾಗಿದೆ. ನೀರು ಕೂಡ ಲಭ್ಯವಿದೆ. ಈ ಜಮೀನನ್ನು 27 ವರ್ಷಗಳ ಹಿಂದೆ industrial area ಗಾಗಿ ತೆಗೆದುಕೊಳ್ಳಲಾಗಿತ್ತು. ಒಟ್ಟು 2000 ಎಕರೆ ಭೂಮಿಯನ್ನು industrial area ಗಾಗಿ ತೆಗೆದುಕೊಂಡಿದ್ದರೆ. ಅದರಲ್ಲಿ ಹೊಸ ಉಷ್ಣ ವಿದ್ಯುತ್ ಸ್ಥಾವರಗಳಿಗೆ ನೀಡಿದ ಜಮೀನು 836 ಎಕರೆ ಮಾತ್ರ. ಉಳಿದ ಜಮೀನು ಬೇರೆ ಕೈಗಾರಿಕೆಗಳಿಗೆ ಲಭ್ಯವಿದೆ. ಹಾಗೂ ಇದನ್ನು ಹೆಚ್ಚು ಜಮೀನು ಬೇಕಿದ್ದಲ್ಲಿ. ಪಕ್ಕದಲ್ಲಿರುವ ಖಾಲಿ ಜಮೀನನ್ನು ಬೇರೆ ಕೈಗಾರಿಕೆಗಳಿಗೆ ವಶಪಡಿಸಿಕೊಳ್ಳಬಹುದಾಗಿದೆ.

ಈ ಯೋಜನೆಗೆ ಸಂಬಂಧಿಸಿದಂತೆ ಎಲ್ಲಾ ಅನುಮತಿಗಳನ್ನು ಈಗಾಗಲೇ ಪಡೆದುಕೊಳ್ಳಲಾಗಿದೆ. ಅದರ ವಿವರಗಳನ್ನು ಈ ಕೆಳಗಿನಂತೆ ನೀಡಲಾಗಿದೆ.

1) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ದಿನಾಂಕ 31–3–2009)

2) ಮೀನುಗಾರಿಕೆ ಇಲಾಖೆ (ದಿನಾಂಕ 17–12–2008)

3) ವಿಮಾನ ನಿಲ್ದಾಣದ ಪ್ರಾಧಿಕಾರ (ದಿನಾಂಕ 23–2–2009)

4) ಭಾರತದ ಪ್ರಾಚ್ಯವಸ್ತು ಅನ್ವೇಷಣಾ ಇಲಾಖೆ (ದಿನಾಂಕ 23–3–2009)

ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು): ಮಾನ್ಯ ಉಪಾಧ್ಯಕ್ಷರೆ, ಸಚಿವರು ಉತ್ತರದಲ್ಲಿ ಎರಡು ಅಂಶಗಳನ್ನು ಹೇಳಿದ್ದಾರೆ. ಅಲ್ಲಿ ವಿರೋಧವಾಗಿ ಹೋರಾಟ ನಡೆಯುತ್ತಿರುವುದು ಸತ್ಯ. ಪರವಾಗಿ ಹೋರಾಟ ನಡೆಯುತ್ತಿರುವುದು ಅಷ್ಟೆ ಸತ್ಯ ಎಂದು ಹೇಳಿದ್ದಾರೆ. ವಿರೋಧವಾಗಿ ಹೋರಾಟ ನಡೆಯುತ್ತಿರುವುದಕ್ಕೆ ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಅವರು ಎಲ್ಲಾ ಶಾಸಕರನ್ನು ಕರೆದು ಪರಿಸರದ ಮೇಲೆ ಏನು ಪರಿಣಾಮವಾಗುತ್ತದೆ, ಇದನ್ನು ಏಕೆ ತಡೆಯಬೇಕು ಎನ್ನುವುದರ

ಬಗ್ಗೆ ಚರ್ಚೆ ಮಾಡಿದ್ದಾರೆ. ಆದರೆ, ಪರವಾಗಿ ಹೋರಾಟ ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿಲ್ಲ. ಹೀಗಾಗಿ ಇದನ್ನು ತಪ್ಪಾಗಿ ಹೇಳುತ್ತಿದ್ದಾರೆಂದು ನಾನು ಹೇಳಲಿಕ್ಕಿಚ್ಚಿಸುತ್ತೇನೆ. ಇದರಲ್ಲಿ ಎಲ್ಲಾ ಅನುಮತಿಗಳನ್ನು ಈ ನಾಲ್ಕು ಇಲಾಖೆಗಳಿಂದ ಅಂದರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮೀನುಗಾರಿಕೆ ಇಲಾಖೆ, ವಿಮಾನ ನಿಲ್ದಾಣದ ಪ್ರಾಧಿಕಾರ, ಭಾರತದ ಪ್ರಾಚ್ಯವಸ್ತು ಅನ್ವೇಷಣಾ ಇಲಾಖೆಗಳಿಂದ ತೆಗೆದು ಕೊಂಡಿದ್ದಾರೆಂದು ತೋರಿಸಿದ್ದಾರೆ. ಆದರೆ ಇದರಲ್ಲಿ environment ಬಗ್ಗೆ ಹೇಳಿಲ್ಲ. ಆದರೆ ಒಂದು ಅಂಶವನ್ನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದಕ್ಕೆ ಬಯಸುತ್ತೇನೆ. ಯಾವುದೇ ಯೋಜನೆಗಳನ್ನು ಪ್ರಾರಂಭಿಸುವುದಕ್ಕಿಂತ ಮುಂಚೆ...

ಉಪಾಧ್ಯಕ್ಷರು: ಉತ್ತರದಲ್ಲಿ ನಿಮಗೇನು ಕ್ಲಾರಿಫಿಕೇಷನ್ ಬೇಕು ಅಷ್ಟನ್ನು ಮಾತ್ರ ಕೇಳಿ.

ಶ್ರೀ ವೆಂಕಟರಾವ್ ನಾಡಗೌಡ: ಈಗಾಗಲೇ 2400 ಮೆ.ವ್ಯಾ. ಸಾಮರ್ಥ್ಯದ ಯರಮರಸ್ ಮತ್ತು ಯದ್ದಲ್ಲಾಪುರ ಗ್ರಾಮಗಳಲ್ಲಿ.

ಉಪಾಧ್ಯಕ್ಷರು: ನೀವು ಡಿಟೇಲ್ಸ್‌ಗೆ ಹೋಗಬೇಡಿ. ಅವಕಾಶವಿಲ್ಲ. ನಿಮಗೇನು ಕ್ಲಾರಿಫಿಕೇಷನ್ ಬೇಕು ಅಷ್ಟನ್ನು ಮಾತ್ರ ಬಹಳ ಸಿಂಪಲ್ ಆಗಿ ಕೇಳಿ. ನೀವು ಇಡೀ ಉತ್ತರ ಓದಿಕೊಂಡು ಕುಳಿತರೆ ಹೇಗೆ? ಆಯಿತು ಕೇಳಿ.

ಶ್ರೀ ವೆಂಕಟರಾವ್ ನಾಡಗೌಡ: ಡಿಟೇಲ್ಸ್ ಓದುವುದಿಲ್ಲ ಸಾರ್. ನನಗೆ ಒಂದು ನಿಮಿಷ ಅವಕಾಶ ಕೊಡಿ ನಾನು ಕೇವಲ ಕ್ಲಾರಿಫಿಕೇಷನ್ ಮಾತ್ರ ಕೇಳುತ್ತೇನೆ. ನೀವು ಇದನ್ನು ಈಗ ಮಾಡಬೇಕಾದರೆ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಥರ್ಮಲ್ ಪವರ್ ಸ್ಟೇಷನ್ ಸ್ಥಾಪಿಸುವಾಗ Impact Environmental Study ಮಾಡಬೇಕಾಗುತ್ತದೆ. ಇದನ್ನು ಒಂದು ಊರಿನಲ್ಲಿ ಮಾಡಿದ್ದಾರೆ. ಯರಮರಸ್ ಎನ್ನುವ ಊರಿನಲ್ಲಿ ಮಾಡಿಲ್ಲ. ಇದನ್ನು ಮಾಡಬೇಕಾದರೆ ಒಂದು ರೂಲ್ಸ್ ಇದೆ. State level Environment Impact Assessment Authority ರಚನೆ ಮಾಡಿ ಅವರಿಂದ ಮಾಡಬೇಕೆಂದು ಇದೆ. ಅದರೆ, ಇವರು ಹೈದಾರಬಾದ್ ಮೂಲದ ಒಂದು ಸಂಸ್ಥೆಯಿಂದ ಅದಕ್ಕೆ sancitity ಇಲ್ಲ, ಅಂಥ ಸಂಸ್ಥೆಯಿಂದ ಅಲ್ಲಿ environment study ಮಾಡಿದ್ದಾರೆ. ಇದನ್ನು ಮಾಡುವುದಕ್ಕೆ ಕೇಂದ್ರ ಸರ್ಕಾರದವರು ಗೈಡ್‌ಲೈನ್ಸ್ ಹಾಕಿ ಕೊಟ್ಟಿದ್ದಾರೆ. ಯಾವ ಕಮಿಟಿ ಇರಬೇಕು, ಅದರಲ್ಲಿ ಯಾರ್ಯಾರು ಸದಸ್ಯರಾಗಿರಬೇಕು ಎನ್ನುವುದಕ್ಕೆ ಅವರದೇ ಆದ ನಿಯಮಗಳನ್ನು ಮಾಡಿ State Level

Environment Impact Assessment Authority ಇವರಿಂದ ಮಾಡಬೇಕಾಗುತ್ತದೆ. ಇದನ್ನು ರಚಿಸದೇ ಯಾವುದೇ ಒಂದು sanctity ಇಲ್ಲದೇ ಇರುವ ಸಂಸ್ಥೆಯಿಂದ ಅಲ್ಲಿ ರಚನೆ ಮಾಡಿದ್ದಾರೆ. ರಚನೆ ಮಾಡಿ National Thermal Power Corporation ಸೂತ್ರಗಳ ಆಧಾರಿತ ಕಲ್ಲಿದ್ದಲು ಆಧಾರಿತ ಥರ್ಮಲ್ ವಿದ್ಯುತ್ ಘಟಕವನ್ನು ಎಲ್ಲಾದರೂ ಸ್ಥಾಪಿಸಬೇಕಾದರೆ ನಗರದಿಂದ 25 ಕಿ.ಮೀ. ದೂರ ಇರಬೇಕೆನ್ನುವ ಕಾನೂನು ಇದೆ. ಈ ಕಾನೂನನ್ನೇ ಉಲ್ಲಂಘನೆ ಮಾಡಿದ್ದಾರೆ. ರಾಯಚೂರಿಗೆ 5 ಕಿ.ಮೀ. ಅಂತರದಲ್ಲಿಯೇ ಈ ಯರಮರಸ್ ಬರುತ್ತದೆ.

ಉಪಾಧ್ಯಕ್ಷರು: ನಾನು ತಮಗೆ ಆಗಾಗ್ಗೆ ಹೇಳುತ್ತಿದ್ದೇನೆ. ದಯಮಾಡಿ ಕ್ಲಾರಿಫಿಕೇಷನ್ ಕೇಳಿ.

ಶ್ರೀ ವೆಂಕಟರಾವ್ ನಾಡಗೌಡ: ಅಲ್ಲಿ ಹೋರಾಟಗಳು ನಡೆಯುತ್ತಿವೆ, ಅಲ್ಲಿ ಕೇವಲ 5 ಕಿ.ಮೀ. ಅಂತರವಿದೆ.

ಶ್ರೀ ಉಮೇಶ್ ವಿ. ಕತ್ತಿ: ಹೊಸದಾಗಿ ಬಂದಿರತಕ್ಕಂಥ ಯುವಕರು ಕೇಳುತ್ತಿರುವಾಗ ತೊಂದರೆ ಮಾಡಿದಿರಿ. ಇವರಿಗೆ ಕ್ಲಾರಿಫಿಕೇಷನ್ ಕೇಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ತೋಟಗಾರಿಕೆ ಇಲಾಖೆಯ ಬಗ್ಗೆ ಕ್ಲಾರಿಫಿಕೇಷನ್ ಕೇಳಿ ಎಂದಿದ್ದಾರೆ ನಾನು ಬೇಡ ಸಾರ್ ಎಂದು ಹೇಳುತ್ತಿದ್ದೆ. ಇಂಧನ ಇಲಾಖೆಯ ಸಚಿವರು ಉತ್ತರ ಕೊಡುವುದಕ್ಕೆ ಸಮರ್ಥರಾಗಿದ್ದಾರೆ.

ಶ್ರೀ ವೆಂಟರಾವ್ ನಾಡಗೌಡ: ಅದಕ್ಕಾಗಿ ನಾನು ಹೇಳುತ್ತಿರುವುದು, Environement Protection Rule 1996 ಉಲ್ಲಂಘನೆಯಾಗಿದೆ. ಅದನ್ನು ಮಾಡಿಲ್ಲ. ಆ ಕಮಿಟಿ ಹೇಗೆ ಇರಬೇಕೆನ್ನುವ ಆದೇಶವನ್ನು ತಮಗೆ ಬೇಕಾದರೆ ಕಳುಹಿಸಿ ಕೊಡುತ್ತೇನೆ.

ಉಪಾಧ್ಯಕ್ಷರು: ಉಲ್ಲಂಘನೆಯಾಗಿದೆ ಎಂದು ಹೇಳಿ ಬಿಡಿ ಸಾಕು.

ಶ್ರೀ ವೆಂಕಟರಾವ್ ನಾಡಗೌಡ: ಕಾನೂನು ಉಲ್ಲಂಘನೆಯಾಗಿದೆ, 25 ಕಿ.ಮೀ. ದೂರ ಇರಬೇಕೆಂದು ಹೇಳಿದ್ದರೆ ಅದು 5 ಕಿ.ಮೀ. ಅಂತರವಿದೆ.

ಉಪಾಧ್ಯಕ್ಷರು: ಆಯಿತು ಕಮಿಟಿ ನಿಯಮ ಉಲ್ಲಂಘನೆಯಾಗಿದೆ. ಸಿಂಪಲ್ ಆಗಿ ಮುಗಿಸಿ. ಉಲ್ಲಂಘನೆಯಾಗಿದೆ ಆಯಿತು.

ಶ್ರೀ ವೆಂಕಟರಾವ್ ನಾಡಗೌಡ: ಮಾತನಾಡುವುದೇ ಬೇಡ ಎನ್ನುವುದಾದರೆ ನೀವು ಮಾಡಿಬಿಡಿ ಸಾರ್, ನೀವು ಹೇಳಿಬಿಡಿ ನಾವು ಕೇಳಿ ಹೋಗಿ ಬಿಡುತ್ತೇವೆ. ನೀವು ಕೇಳಲೇಬೇಡಿ ಆಯಿತು ಎಂದರೆ ಏನರ್ಥ? ಆಯಿತು ಬಿಡಿ.

ಶ್ರೀ ಅಮರಗೌಡ ಲಿಂಗನಗೌಡ ಬಯ್ಯಾಪುರ: ಮಾನ್ಯ ಸದಸ್ಯರು ಹೇಳಿದ ಹಾಗೆ ಸರ್ಕಾರ ಪರಿಸರ ಇಲಾಖೆಯಿಂದ ಅನುಮತಿ ತೆಗೆದುಕೊಂಡಿಲ್ಲ.

ಶ್ರೀ ವೆಂಕಟರಾವ್ ನಾಡಗೌಡ: 5 ಕಿ.ಮೀ. ಅಂತರದಲ್ಲಿಯೇ ಮಾಡುವುದರಿಂದ ಅಲ್ಲಿ ಯಾರೂ ವಾಸ ಮಾಡದಿರುವ ಪರಿಸ್ಥಿತಿಯಾಗುತ್ತದೆ. ಹಾರುಬೂದಿ ರಾಯಚೂರು ಸಿಟಿಯ ಒಳಗಡೆ ಬರುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ನಾವು ಮನವಿ ಮಾಡುತ್ತಿದ್ದೇವೆ. ಥರ್ಮಲ್ ಘಟಕಗಳು ಬರಬಾರದು ಎನ್ನುವ ವಾದವಿಲ್ಲ. ಆದರೆ ಟೌನ್‌ನಲ್ಲಿ ತಂದು ಥರ್ಮಲ್ ಘಟಕ ಹಾಕುತ್ತೇವೆಂದರೆ? ನೀವು ಅಲ್ಲಿ ಎಲ್ಲೋ ಇದ್ದವರು ಕಿತ್ತುಕೊಂಡು ಹೋದರು ನಿಮಗೆ ಅಲ್ಲಿ ಮಾಡುವುದಕ್ಕೆ ಆಗಲಿಲ್ಲ. ಇಲ್ಲಿ ನಮ್ಮ ಊರಿನಲ್ಲಿ ದಡ್ಡರು ಇದ್ದಾರೆ ನೀವು ಇಲ್ಲಿ ಬಂದು ಸ್ಥಾಪಿಸುತ್ತೇವೆಂದರೆ ಅವರು ಏನು ಮಾಡಬೇಕು? ಸಾರ್ ದಯಮಾಡಿ ಅಲ್ಲಿಯ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಿ. ನೀವು ಬುದ್ಧಿವಂಥರು, ಅಲ್ಲಿ ಮಾಡಿದರೆ ಪರಿಸರ ಹಾಳಾಗುತ್ತದೆ ಎಂದು ವಾದ ಮಾಡುತ್ತೀರಿ. ನಾವು ಕೂಡ ಅದನ್ನೇ ಹೇಳಿ ಇಲ್ಲಿ ಮಾಡುವುದರಿಂದ ಪರಿಸರ ಹಾನಿಯಾಗುತ್ತದೆಂದು ಹೇಳುತ್ತಿದ್ದೇವೆ.

ಉಪಾಧ್ಯಕ್ಷರು: ಗಮನ ಸೆಳೆಯುವ ಸೂಚನೆಯಲ್ಲಿ ಚರ್ಚೆಗೆ ಅವಕಾಶವಿಲ್ಲ. ಇದು ಬಹಳ ಸ್ಪಷ್ಟವಾಗಿದೆ.

ಶ್ರೀ ವೆಂಕಟರಾವ್ ನಾಡಗೌಡ: ಈಗ ಅವಕಾಶವಿಲ್ಲ ಎಂದರೆ ನಾವು ಏನು ಮಾಡಬೇಕು? ಅಲ್ಲಿ ತೊಂದರೆಯಾಗಿ, ಕಾನೂನು ಉಲ್ಲಂಘನೆಯಾಗಿದೆ. ಅದನ್ನು ಹೇಳಬಾರದು ಎಂದರೆ ಹೇಗೆ?

ಉಪಾಧ್ಯಕ್ಷರು: ಆಯಿತು ಅದರೆ ನೀವು ಅದನ್ನು ಎಕ್ಸ್‌ಪ್ಲೇನ್ ಮಾಡುವುದಕ್ಕೆ ಹೋಗಬೇಡಿ. ಅಲ್ಲಿ ಏನು ವಯಲೇಷನ್ ಆಗಿದೆ ಅದನ್ನು ಹೇಳಿ.

ಶ್ರೀ ಅಮರಗೌಡ ಲಿಂಗನಗೌಡ ಬಯ್ಯಾಪುರ: ಈಗಾಗಲೇ ಸನ್ಮಾನ್ಯ ಸಚಿವರು ಹೇಳಿದ್ದಾರೆ. ಅಲ್ಲಿ ಈ ವಿದ್ಯುತ್ ಸ್ಥಾವರ ಬರಬೇಕು ಎಂದು ಹೋರಾಟ ಮಾಡತಕ್ಕಂಥ ಸಂಸ್ಥೆಗಳು ಒಂದು ಇಲ್ಲ. ಇದು ಸರ್ಕಾರ ಸದನಕ್ಕೆ ತಪ್ಪು ಮಾಹಿತಿ ಕೊಡುತ್ತಿದೆ. ಇಲ್ಲಾಂದ್ರೆ ಆ ಸಂಘ ಸಂಸ್ಥೆಗಳ ಹೆಸರುಗಳನ್ನು ಹೇಳಿ. ಈಗಾಗಲೇ ರಾಯಚೂರಿನಲ್ಲಿ 7 ಯೂನಿಟ್‌ಗಳು ಕೆಲಸ ಮಾಡುತ್ತಿವೆ.

ಉಪಾಧ್ಯಕ್ಷರು: ಮುಗಿಸಿ. ನಿಮ್ಮದು ಇದಕ್ಕೆ ಸಹಿ ಇಲ್ಲ. ನೋ. ನೀವು ಸಹಿ ಮಾಡಿ ಬೇರೆ ಕಳುಹಿಸಿ.

(ಗೊಂದಲ)

ಶ್ರೀ ಅಮರಗೌಡ ಲಿಂಗನಗೌಡ ಬಯ್ಯಾಪುರ: ರಾಯಚೂರಿನಲ್ಲಿ ಏನಾಗಿದೆ ಎಂಬುದನ್ನು ನೀವು ಕೇಳದೇ ಹೋದರೆ ಹೇಗೆ? ನಾವು ರಾಯಚೂರಿನವರು, ಅಲ್ಲಿಯ ಪ್ರತಿನಿಧಿಯಾಗಿ ಸರ್ಕಾರ ಮುಂದೆ ಹೇಳದೆ ಯಾರ ಮುಂದೆ ನಮ್ಮ ಸಮಸ್ಯೆಗಳನ್ನು ಹೇಳಬೇಕು? ಒಂದು ನಿಮಿಷ ಅವಕಾಶ ಕೊಡಿ. ಅಲ್ಲಿ ಈಗಾಗಲೇ 7 ಯೂನಿಟ್‌ಗಳು ಕೆಲಸ ಮಾಡುತ್ತಿರುವುದರಿಂದ ಉಷ್ಣತೆಯ ತೀವ್ರತೆಯನ್ನು ತಾವು ಗಮನಿಸಿ. ಬೇಸಿಗೆಯಲ್ಲಿ 49 ಡಿಗ್ರಿ ಉಷ್ಣತೆ ಇರುತ್ತದೆ. ಹೀಗಿರುವಾಗ ಪಟ್ಟಣಕ್ಕೆ ಕೇವಲ 5 ಕಿ.ಮೀ. ಅಂತರದಲ್ಲಿಯೇ ವಿದ್ಯುತ್ ಸ್ಥಾವರ ಸ್ಥಾಪಿಸುತ್ತಿರುವುದರಿಂದ 50 ಡಿಗ್ರಿ ಉಷ್ಣತೆ ದಾಟಿದರೆ ಮನುಷ್ಯ ಬದುಕಲಿಕ್ಕೆ ಸಾಧ್ಯವಿಲ್ಲ. ಈಗಾಗಲೇ ವಯಸ್ಸಾದವರು ಬೇಸಿಗೆಯಲ್ಲಿ ಮರಣ ಹೊಂದಿರತಕ್ಕಂಥ ಉದಾಹರಣೆಗಳಿವೆ. ಹೀಗಿರುವಾಗ ಮತ್ತೆ ನೀವು ಅಲ್ಲಿ ಮಾಡುತ್ತೀರಿ ಎಂದರೆ ನಾವು ಏನು ಮಾಡಬೇಕು? ಇದನ್ನು ಯಾರು ಕೇಳುವವರು ಇಲ್ಲವೆ? ಅಲ್ಲಿ ಹೋರಾಟ ನಡೆಯುತ್ತಿದೆ. ಹೀಗಾಗಿ ದಯವಿಟ್ಟು ಇದನ್ನು ಸರ್ಕಾರ ಕೈಬಿಡಬೇಕು ಎಂದು ತಮ್ಮ ಮೂಲಕ ಮನವಿ ಮಾಡುತ್ತೇನೆ.

ಶ್ರೀ ವೆಂಕಟರಾವ್ ನಾಡಗೌಡ: ದಯವಿಟ್ಟು ಇದನ್ನು ಪರಿಶೀಲಿಸ ಬೇಕೆಂದು ನಾನು ವಿನಂತಿ ಮಾಡುತ್ತೇನೆ. ಇಲ್ಲಾಂದ್ರೆ ಬಹಳ ತೊಂದರೆಯಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮೊದಲನೆಯದಾಗಿ ಮಾನ್ಯ ನಾಡಗೌಡರವರು ಈ ಪರಿಸರ ಇಲಾಖೆಯಿಂದ ಅನುಮತಿ ತೆಗೆದುಕೊಂಡಿಲ್ಲ ಬಾಕಿ ಎಲ್ಲಾ ಇಲಾಖೆಯಿಂದ ತೆಗೆದುಕೊಂಡಿದ್ದಾರೆಂದು ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಭಾರತ ಸರ್ಕಾರದ ಪರಿಸರ ಇಲಾಖೆಯ ಅಧಿಕಾರಿಗಳ ಜೊತೆಗೆ ನಮ್ಮ ಅಧಿಕಾರಿಗಳು ಹೋಗಿ ಅಲ್ಲಿ ಚರ್ಚೆ ಮಾಡಿರುವುದರಿಂದ ಅನುಮತಿ ಪತ್ರ ಕೊಡುವುದು ಅಂತಿಮ ಹಂತದಲ್ಲಿದೆ. ಇನ್ನೊಂದು ಎರಡು ತಿಂಗಳಲ್ಲಿ ಆ ಒಂದು ಅನುಮತಿ ದೊರೆಯುತ್ತದೆ. ಇದೇನು ಹೊಸದಾಗಿ ಅಲ್ಲ. ಹಿಂದೆ ಬಳ್ಳಾರಿ ಶಾಖೋತ್ಪನ್ನ ಘಟಕದ ಶಂಕುಸ್ಥಾಪನೆ ಆದ ಮೂರು ವರ್ಷಕ್ಕೆ, ಶ್ರೀಮತಿ ಸೋನಿಯಾಗಾಂಧಿಯವರು ಬಂದು ಉದ್ಘಾಟನೆ ಮಾಡಿ ಹೋಗಿ ನಂತರ ಮೂರು ವರ್ಷವಾದ ಮೇಲೆ ಪರಿಸರ ಇಲಾಖೆಯವರು ಪರವಾನಿಗೆ ಕೊಟ್ಟರು. ಮಾನ್ಯ ಜೆ.ಹೆಚ್. ಪಟೇಲ್‌ರವರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ

7ನೇ ಘಟಕ ಶಂಕುಸ್ಥಾಪನೆಯಾಗಿ ಒಂದು ವರ್ಷದ ನಂತರ ಪರಿಸರ ಇಲಾಖೆಯಿಂದ ಕೇಂದ್ರದ ಅನುಮತಿ ಬಂತು. ಹೀಗಿರುವಾಗ ಈಗಾಗಲೇ ನಮ್ಮ ಅಧಿಕಾರಿಗಳು ಕೇಂದ್ರ ಸರ್ಕಾರದ ಅಧಿಕಾರಗಳ ಜೊತೆಗೆ ಚರ್ಚೆ ಮಾಡದ್ದಾರೆ, ಎಲ್ಲಾ ಫೈನಲ್ ಆಗಿದೆ ಇನೇನು ಎರಡು ತಿಂಗಳಲ್ಲಿ ಅದಕ್ಕೆ ಅನುಮತಿ ಬರುತ್ತದೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ್: ಮಾನ್ಯ ಸಚಿವರ ಉತ್ತರದಿಂದ ನಮಗೆ ತೃಪ್ತಿಯಾಗಿಲ್ಲ.

ಶ್ರೀ ವೆಂಕಟರಾವ್ ನಾಡಗೌಡ: ಇವರು ಯಾವ ಏಜೆನ್ಸಿಯಿಂದ ಸರ್ವೆ ಮಾಡಿಸಿದ್ದಾರೆ ಅದಕ್ಕೆ ಸ್ಯಾಂಟಿಟಿ ಇಲ್ಲ. ಅದನ್ನು ಮಾಡುವುದಕ್ಕೆ ಕೇಂದ್ರ ಸರ್ಕಾರ ಯಾವ ರೀತಿ ಕಮಿಟಿ ಮಾಡಬೇಕೆನ್ನುವುದಕ್ಕೆ ಒಂದು ರೂಲ್ಸ್ ಫ್ರೇಮ್ ಮಾಡಿದ್ದಾರೆ.

ಆ ಕಮಿಟಿಯಲ್ಲಿ ಯಾರ್ಯಾರು ಸದಸ್ಯರು ಇರಬೇಕೆಂಬುದರ ಬಗ್ಗೆ ಕೂಡ ಅದರಲ್ಲಿ ತೋರಿಸಿದ್ದಾರೆ. ಆ ಒಂದು ಕಮಿಟಿಯವರು ಮಾತ್ರ ಅಲ್ಲಿಗೆ ಹೋಗಿ ಸ್ಟಡಿ ಮಾಡಬೇಕು. ಆದರೆ ಈ ಕೆಲಸವಾಗಿಲ್ಲ ಮತ್ತೆ ಅದು ವೈಲೇಟ್ ಆಗಿದೆ ಎಂದು ಹೇಳುತ್ತಿದ್ದೇನೆ. ಮಾನ್ಯ ಸಚಿವರು ಇದನ್ನು ಗಮನಿಸಬೇಕು. ಬೇಕಾದರೆ ಇದರ ಒಂದು ಕಾಪಿಯನ್ನು ಮಾನ್ಯ ಸಚಿವರಿಗೆ ಕಳುಹಿಸಿ ಕೊಡುತ್ತೇನೆ. ಕಮಿಟಿ ಯಾವ ರೀತಿಯಾಗಿ ಮಾಡಬೇಕೆಂಬುದರ ಬಗ್ಗೆ ಕೂಡ ಇದರಲ್ಲಿ ಹೇಳಿದ್ದಾರೆ. ಇದನ್ನು ಗಮನಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಸದಸ್ಯರ ಭಾವನೆಯನ್ನು ಮಾನ್ಯ ಸಚಿವರು ಅರ್ಥಮಾಡಿಕೊಳ್ಳಬೇಕು. ಅಲ್ಲಿ ಈ ಘಟಕವನ್ನು ಪ್ರಾರಂಭ ಮಾಡುವುದರಿಂದ, ಅಲ್ಲಿ ಉಷ್ಣಾಂಶ ಹೆಚ್ಚಾಗಿ ಆರೋಗ್ಯದ ಮೇಲೆ ದುಷ್ಪರಿಣಾಮ ಬೀಳುತ್ತದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಾರೆ. ಇದು ಹೌದೋ ಅಥವಾ ಇಲಲವೋ ಎಂದು ಹೇಳುವುದನ್ನು ಬಿಟ್ಟು ಶ್ರೀಮತಿ ಸೋನಿಯಾ ಗಾಂಧಿಯವರು ಬಂದು foundation ಹಾಕಿದ್ದರೆಂದು ತಾವು ಎಲ್ಲಿಗೋದರು ರಾಜಕೀಯಕ್ಕೆ ಬಂದು ಬಿಡುತ್ತೀರಿ. ನಾನು ಹೇಳುವುದೇನೆಂದರೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ತಾವು ಉತ್ತರ ಕೊಟ್ಟಿದ್ದೀರಾ? ಇದರ ಬಗ್ಗೆ ತಾವು ಹೇಳಿ? ಎಲ್ಲೊಂದು ಕಡೆ ವಿರೋಧ ಮಾಡುತ್ತಾರೆಂಬ ಭಾವನೆ ಬೇಡ. ಆ ಭಾಗದ ಜನರ ಭಾವನೆ ಏನಿದೆ ಅದರ ಬಗ್ಗೆ ಕ್ಲಾರಿಫೈ ಮಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಕೇಂದ್ರ ಸರ್ಕಾರದ ಪರಿಸರ ಇಲಾಖೆ ಇದನ್ನೆಲ್ಲಾ ಯೋಚನೆ ಮಾಡಿಯೇ ಅನುಮತಿ ಕೊಡುವುದು. ಅಲ್ಲಿ ಉಷ್ಣ ಜಾಸ್ತಿಯಾಗುತ್ತದೆಯೋ ಅಥವಾ ಇಲ್ಲವೋ ಮತ್ತೆ ಪರಿಸರ ಹಾನಿಯಾಗುತ್ತದೆಯೋ ಅಥವಾ ಇಲ್ಲವೋ ಎಂದು ಮತ್ತು ಅಲ್ಲಿನ ಜನರಿಗೆ ಇದರಿಂದ ಅನ್ಯಾಯವಾಗುತ್ತದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಯೋಚನೆ ಮಾಡಿಯೇ ಕೇಂದ್ರ ಸರ್ಕಾರ ಅನುಮತಿ ಕೊಡುವುದು.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ: ಕೇಂದ್ರ ಸರ್ಕಾರದ ಅನುಮತಿ ಬಂದ ಮೇಲೆ ಮಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ: ನಾನು ಹೇಳುವುದನ್ನು ಕೇಳಿ. ನಾವೇನು ಹೊಸದಾಗಿ ಮಾಡುತ್ತಿಲ್ಲ. ಬಳ್ಳಾರಿಯಲ್ಲಿ ಶ್ರೀಮತಿ ಸೋನಿಯಾ ಗಾಂಧಿಯವರು ಶಂಕುಸ್ಥಾಪನೆ ಮಾಡಿ ಮೂರು ವರ್ಷಗಳ ನಂತರ ಅನುಮತಿ ಸಿಕ್ಕಿತು. ನಾವು ಅನುಮತಿ ಬರುವವರೆಗೂ ಕಾಯುತ್ತಾ ಕುಳಿತರೆ ವಿದ್ಯುತ್ ಇಲ್ಲವೆಂದು ಜನ ಸಾಯುತ್ತಾರಷ್ಟೆ. ನಾವೇನು ಹೊಸದಾಗಿ ಸಮಸ್ಯೆಯನ್ನು ಉದ್ಭವ ಮಾಡುತ್ತಿಲ್ಲ. ಇದರ ಬಗ್ಗೆ ಸಮಸ್ಯೆ ಇರುವುದಕ್ಕೋಸ್ಕರವೇ ಅಲ್ಲಿ ಘಟಕ ಮಾಡಬೇಕೆಂದು ತೀರ್ಮಾನ ಮಾಡಿದ್ದು, ಇದಕ್ಕೆ ಸಂಬಂಧಪಟ್ಟಂತೆ ಎಲ್ಲಾ ಇಲಾಖೆಯ ಒಪ್ಪಿಗೆಗಳು ಈಗಾಗಲೇ ಬಂದಿವೆ. ಮಾನ್ಯ ವೆಂಕಟರಾವ್ ನಾಡಗೌಡರವರು ಹೇಳಿದ ಹಾಗೆ ಕೇಂದ್ರ ಸರ್ಕಾರದ ನಾರ್ಮ್ಸ್ ಪ್ರಕಾರ ಇದ್ದು ಅದಕ್ಕೆ ಕೇಂದ್ರ ಸರ್ಕಾರ ಅನುಮತಿ ಕೊಟ್ಟರೆ ಮಾತ್ರ ಇದು ಆಗುವುದು. ಇದರ ಬಗ್ಗೆ ಅವರೇ ತೀರ್ಮಾನ ಮಾಡಿದ್ದಾರೆ. ನಾವು ತೀರ್ಮಾನ ಮಾಡಿರುವುದಲ್ಲ. ನಮ್ಮ ಅಧಿಕಾರಿಗಳು ಅಲ್ಲಿಗೆ ಹೋಗಿ ಇದರ ಬಗ್ಗೆ ಸುಮಾರು ಹತ್ತಾರು ಸಭೆಗಳನ್ನು ಮಾಡಿದ್ದಾರೆ. ಇನ್ನು ಎರಡು ತಿಂಗಳಲ್ಲಿ ಕೇಂದ್ರ ಸರ್ಕಾರದ ಅನುಮತಿ ಸಿಗುತದೆಂಬ ಮಾಹಿತಿ ಬಂದಿದೆ. ಆದ್ದರಿಂದ ಇದೇನು ನಮ್ಮ ತೀರ್ಮಾನವಲ್ಲ ಮತ್ತೆ ಕೇಂದ್ರದ ಪರಿಸರ ಇಲಾಖೆ ಕೂಡ ನಮ್ಮದೇನು ಅಲ್ಲ ಕೇಂದ್ರ ಸರ್ಕಾರದವರು ಏನು ತೀರ್ಮಾನ ಮಾಡಿದ್ದಾರೆಯೋ ಆ ಪ್ರಕಾರ ಮತ್ತು ಅವರ ನಾರ್ಮ್ಸ್ ಪ್ರಕಾರ ನಾವು ಹೋಗುತ್ತಿದ್ದೇವೆ. ಇನ್ನು ಎರಡು ತಿಂಗಳಲ್ಲಿ ಕೇಂದ್ರ ಸರ್ಕಾರದ ಪರಿಸರ ಇಲಾಖೆಯಿಂದ ಅನುಮತಿ ಕೂಡ ಬರುತ್ತದೆಂಬ ವಿಶ್ವಾಸದಲ್ಲಿ ನಾವಿದ್ದೇವೆ. ಈ ಮಾತನ್ನು ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ತಾವು ಹಿಂದಿನ ವಿಷಯದ ಬಗ್ಗೆ ಊಹೆ ಮಾಡಿ. ನಾನು ಇಲ್ಲಿ ರಾಜಕಾರಣ ಬಳಸುತ್ತಿದ್ದೇನೆಂದು ತಾವು ದಯವಿಟ್ಟು ತಪ್ಪು ತಿಳಿದುಕೊಳ್ಳ

ಬೇಡಿ. ನಾನು ಸೋನಿಯಾ ಗಾಂಧಿ ಎಂದ ತಕ್ಷಣ ಇದು ರಾಜಕಾರಣವೆಂದು ನಿಮಗೇಕೆ ಆ ರೀತಿ ಅನಿಸಿತು? ಸೋನಿಯಾ ಗಾಂಧಿಯವರು ಬಳ್ಳಾರಿಗೆ ಬಂದು ಉದ್ಘಾಟನೆ ಮಾಡಿ ಮೂರು ವರ್ಷದ ನಂತರ ಪರಿಸರ ಇಲಾಖೆಯಿಂದ ಅನುಮತಿ ಬಂತೆಂದು ಹೇಳಿದೆಯಷ್ಟೆ. ಮತ್ತೆ ಮಾನ್ಯ ಜೆ.ಹೆಚ್. ಪಟೇಲ್‌ರವರು ಬಂದು ಶಂಕುಸ್ಥಾಪನೆ ಮಾಡಿ ಒಂದು ವರ್ಷವಾದ ನಂತರ ಅನುಮತಿ ಸಿಕ್ಕಿತೆಂದು ಹೇಳಿದೆ ವಿನಃ ಬೇರೆ ಉದ್ದೇಶದಿಂದ ನಾನು ಹೇಳಿಲ್ಲ. ಶ್ರೀಮತಿ ಸೋನಿಯಾ ಗಾಂಧಿ ಮತ್ತು ಮಾನ್ಯ ಜೆ.ಹೆಚ್. ಪಟೇಲ್‌ರವರ ಹೆಸರು ಹೇಳಿದ್ದಕ್ಕೆ ನಿಮಗೇಕೆ ಈ ರೀತಿಯಾಗುತ್ತದೆ ಎಂಬುದು ನನಗೆ ಗೊತ್ತಿಲ್ಲ. ಬಳ್ಳಾರಿ ವಿದ್ಯುತ್ ಘಟಕದ ಪ್ರಾರಂಭಕ್ಕೆ ಅನುಮತಿ ಬರುವುದಕ್ಕಾಗಿ ಮೂರು ವರ್ಷಗಳವರೆಗೆ ಕಾದಿದ್ದರೆ ವಿದ್ಯುತ್‌ನ ಪರಿಸ್ಥಿತಿ ಏನಾಗುತ್ತಿತ್ತೆಂಬುದರ ಬಗ್ಗೆ ದಯವಿಟ್ಟು ಯೋಚನೆ ಮಾಡಿ? ಅನುಮತಿ ಸಿಗುತ್ತದೆಂದು ಕೇಂದ್ರ ಸರ್ಕಾರ ಪರಿಸರ ಇಲಾಖೆಯ ಅಧಿಕಾರಿಗಳು ಹೇಳಿದ್ದಕೋಸ್ಕರ ನಾವು ಶಂಕು ಸ್ಥಾಪನೆ ಮಾಡಿದ್ದೇವೆ. ಇನ್ನು ಎರಡು ತಿಂಗಳಲ್ಲಿ ಅನುಮತಿ ಬರುತ್ತದೆಂಬ ವಿಶ್ವಾಸ ನಮಗೆ ಇದೆ. ಮತ್ತೆ ಅಲ್ಲಿ ಯಾವುದೇ ರೀತಿಯ ಪರಿಸರದ ಹಾನಿಯಾಗುವುದಿಲ್ಲ.

ಶ್ರೀ ವೆಂಕಟರಾವ್ ನಾಡಗೌಡ: 25 ಕಿ.ಮೀ. ದೂರದಲ್ಲಿ ಮಾಡಬೇಕೆಂದು ನಿಯಮ ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ: ಇದನ್ನು ನಾನು ಮಾಡಿಲ್ಲ. ಈ ಪ್ರಶ್ನೆಯನ್ನು ಕೇಂದ್ರ ಸರ್ಕಾರಕ್ಕೆ ಕೇಳಿ. ಕೇಂದ್ರದ ಪರಿಸರ ಇಲಾಖೆ ಇದರ ಬಗ್ಗೆ ತೀರ್ಮಾನ ಮಾಡುತ್ತದೆ.

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ: ಈಗ ಅಲ್ಲಿ ಮಾಡಿದರೆ ತೊಂದರೆಯಾಗುತ್ತದೆ. ಆದ್ದರಿಂದ 25–30 ಕಿ.ಮೀ. ದೂರ ಎಲ್ಲಿಯಾದರು ಮಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಉಪಾಧ್ಯಕ್ಷರೆ, ಕೇಂದ್ರ ಸರ್ಕಾರ ಪರಿಸರ ಇಲಾಖೆಯವರು ಅನುಮತಿ ಕೊಡುವಂಥ ಸಂದರ್ಭದಲ್ಲಿ 25 ಕಿ.ಮೀ. ಅಥವಾ 5 ಕಿ.ಮೀ. ಅಥವಾ 100 ಕಿ.ಮೀ. ಇರಬೇಕೆಂಬುದರ ಬಗ್ಗೆ ಅವರು ತೀರ್ಮಾನ ಮಾಡುತ್ತಾರೆ. ನಾವು ತೀರ್ಮಾನ ಮಾಡುವುದಿಲ್ಲ. ಮಾನ್ಯ ಜಯಚಂದ್ರರವರು ಮತ್ತು ಮಾನ್ಯ ರೇವಣ್ಣನವರು ಅನುಭವಸ್ಥರಿದ್ದೀರಿ. ನಿಮ್ಮ ಶಾಸಕರುಗಳಿಗೆ ಇದನ್ನೆಲ್ಲಾ ತಾವು ಹೇಳಬೇಕಾಗುತ್ತದೆ.

ಶ್ರೀ ಅಮರಗೌಡ ಲಿಂಗನಗೌಡ ಬಯ್ಯಾಪುರ: ಮಾನ್ಯ ಉಪಾಧ್ಯಕ್ಷರೆ, ಅಲ್ಲಿನ ಸಂಘಸಂಸ್ಥೆಗಳ ಜೊತೆ ಚರ್ಚೆ ಮಾಡಿ ಇದರ ಬಗ್ಗೆ ತೀರ್ಮಾನ ತೆಗೆದುಕೊಂಡಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆಂದರೆ, ಕೇಂದ್ರದ ಅನುಮತಿ ಬಂದ ಮೇಲೆ ಪ್ರಾರಂಭ ಮಾಡಿ ಎಂದು ಹೇಳುತ್ತಿದ್ದಾರೆ. ಗುಂಡ್ಯಾ ಘಟಕಕ್ಕೆ ಮಾನ್ಯ ಮುಖ್ಯ ಮಂತ್ರಿಗಳನ್ನು ಕರೆದುಕೊಂಡು ಹೋಗಿ foundation ಹಾಕಿಸಿದ್ದೀರಿ. ಅಲ್ಲಿ Foundation ಹಾಕಿದ ಮೇಲೆ ಕೇಂದ್ರ ಸರ್ಕಾರದಿಂದ ಏನು ಉತ್ತರ ಬಂತು? ಇನ್ನು ಇದು ಕ್ಲಿಯರೆನ್ಸ್ ಆಗಿಲ್ಲವೆಂದು ಉತ್ತರ ಬಂತು. ಆದರೆ, ಎಲ್ಲಾ ರೀತಿಯ ಕ್ಲಿಯರೆನ್ಸ್ ಆಗಿದೆ. ಆದ್ದರಿಂದ, ಪ್ರಾರಂಭ ಮಾಡಬಹುದೆಂದು ಅಧಿಕಾರಿಗಳು ಹೇಳಿದ್ದಾರೆ. ಈ ರೀತಿಯಾಗಿ ಸರ್ಕಾರ ಮತ್ತೆ ಪೇಚಿಗೆ ಸಿಲುಕಬಾರದೆಂದು ಅವರು ನಿಮಗೆ ಸಹಾಯ ಮಾಡುತ್ತಿದ್ದಾರೆ. ಇಲ್ಲಿ ಕರೆದುಕೊಂಡು ಹೋಗಿ foundation ಹಾಕಿದ ನಂತರ ಕೇಂದ್ರ ಸರ್ಕಾರದಿಂದ ಮತ್ತೆ ವರ್ತಮಾನ ಬಂದರೆ ಸರಿಯಾಗುತ್ತದೆಯೇ?

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಗುಂಡ್ಯಾ ಬಗ್ಗೆ ಹೇಳಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಉಪಾಧ್ಯಕ್ಷರೆ, ನನಗೆ ಎರಡು ನಿಮಿಷ ಅವಕಾಶ ಕೊಡಿ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ರೇವಣ್ಣನವರೆ ಗುಂಡ್ಯಾದ ಬಗ್ಗೆ ಹೇಳುತ್ತೇನೆ. ಆನಂತರ ತಾವು ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ: ನಾನು ನಿಮ್ಮ ಪರವಾಗಿಯೇ ಹೇಳುತ್ತೇನೆ. ದಯವಿಟ್ಟು ಯೀಲ್ಡ್ ಆಗಿ. ಗುಂಡ್ಯಾದು ನಮ್ಮ ಕಾಲದಲ್ಲಿಯೇ ಮಾಡಿದ್ದೇವೆ. ಇಲ್ಲಿ ವಿದ್ಯುತ್ ಉತ್ಪಾದನೆ ಮಾಡಿದರೆ ಒಂದು ಯೂನಿಟ್‌ಗೆ ಕೇವಲ 30 ರಿಂದ 50 ಪೈಸೆ ಬೀಳುತ್ತದೆ. ಖಾಸಗಿಯವರು ಮಾಡುವುದಕ್ಕೆ ನಾವ್ಯಾರು ವಿರೋಧ ಮಾಡುವುದಿಲ್ಲ. ಆದ್ದರಿಂದ, ಸರ್ಕಾರದಿಂದ ಮಾಡುವಂಥದ್ದಕ್ಕೆ ನಾವ್ಯಾರು ವಿರೋಧ ಮಾಡುವುದು ಬೇಡ. ಕೆಲವೊಂದು ವಿಷಯಗಳನ್ನು ರಾಜ್ಯದ ಹಿತದೃಷ್ಟಿಯಿಂದ ಮಾಡುವಾಗ ಅದನ್ನು ರಾಜಕೀಯವಾಗಿ ತೆಗೆದುಕೊಳ್ಳುವುದು ಬೇಡ. ಈಗ ಮಾನ್ಯ ಈಶ್ವರಪ್ಪನವರು ಇಂಧನ ಇಲಾಖೆ ಸಚಿವರಾಗಿದ್ದಾರೆ. ಹಿಂದೆ ನಾನೂ ಕೂಡ ಇಂಧನ ಇಲಾಖೆ ಸಚಿವನಾಗಿ ಕೆಲಸ ಮಾಡಿದ್ದೇನೆ.

ಗುಂಡ್ಯಾ ಪ್ರಾಜೆಕ್ಟ್‌ನ್ನು ನನ್ನ ಕಾಲದಲ್ಲಿಯೇ ಮಾಡಿ Government of India clearanceಗೆ ನಾವು ಕಳುಹಿಸಿಕೊಟ್ಟಿದ್ದೆವು. ಅಲ್ಲಿಂದ ಕ್ಲಿಯರ್ ಆಗಿ ಬಂದಿರಬೇಕು ಅಥವಾ ಇನ್ನು ಬರಬಹುದು. ಈಗ ಅಲ್ಲಿಯೇ ಮಾಡುವುದಕ್ಕೆ ನಾಲ್ಕು ಜನ ಖಾಸಗಿಯವರಿಗೆ ಅನುಮತಿ ಕೊಟ್ಟಿದ್ದೀರಿ. ಆದರೆ, ಈ ವಿಷಯವನ್ನು ಏತಕ್ಕೆ ಯಾರು ಪ್ರಸ್ತಾಪ ಮಾಡುತ್ತಿಲ್ಲ. ಇದನ್ನು ಹಿಂದಿನ ಕಾಲದಲ್ಲಿ ಕೊಟ್ಟಿದ್ದಾರೆ. ಗುಂಡ್ಯಾದಲ್ಲಿ ಮಾಡುವುದರಿಂದ ಒಂದು ಯೂನಿಟ್‌ಗೆ ಕೇವಲ 40 ರಿಂದ 50 ಪೈಸೆ ಬೀಳುತ್ತದೆ. ಒಂದು ಯೂನಿಟ್‌ಗೆ 50 ಪೈಸೆ ಬಿದ್ದರೆ ರಾಜ್ಯದ ಜನತೆಗೆ ಅನುಕೂಲವಾಗುವುದಿಲ್ಲವೆ? ನೀವು 10.5 ರೂಪಾಯಿಗೆ ಕರೆಂಟ್ ಖರೀದಿ ಮಾಡುತ್ತಿದ್ದೀರಿ. ನಾವು ರಾಜಕೀಯ ಇಟ್ಟುಕೊಂಡು ಮಾತನಾಡುವುದು ಬೇಡ. ನಾನು ಇಂಧನ ಇಲಾಖೆ ಸಚಿವನಾಗಿದ್ದಂಥ ಸಂದರ್ಭದಲ್ಲಿ ನಾನು ಕೆಪಿಸಿಎಲ್‌ನ Vice Chairmen ಆಗಿದ್ದಾಗ ನಾನು ನಿರ್ಣಯ ಮಾಡಿ 825 ಎಕರೆ ಜಮೀನನ್ನು ಕೆಎಐಡಿಬಿ ಕೊಡಿಸಿರುವುದು ನಿಜ. ಇದನ್ನು ನಾನು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ, ಇವತ್ತಿನ ದಿವಸ ಆ ಭಾಗದ ಶಾಸಕರಾದ ಮಾನ್ಯ ವೆಂಕಟರಾವ್ ನಾಡಗೌಡರು ಮತ್ತು ಮಾನ್ಯ ಅಮರೇಗೌಡ ಲಿಂಗನಗೌಡ ಬಯ್ಯಾಪುರರವರು ಹೇಳುತ್ತಿರುವ ವಿಷಯ ಏನೆಂದರೆ, ಇದರಿಂದ ಸ್ಥಳೀಯ ಜನರಿಗೆ ತೊಂದರೆಯಾಗುತ್ತದೆಂದು ಹೇಳುತ್ತಿದ್ದಾರೆ. ಇದನ್ನು ಮಾಡುವುದು ಒಳ್ಳೆಯದು. ಏಕೆಂದರೆ, ನನ್ನ ಕಾಲದಲ್ಲಿ ಇದರ ಪ್ರಸ್ತಾವನೆ ತೆಗೆದುಕೊಂಡು ಕೆಎಐಡಿಬಿ ಯಿಂದ ಜಾಗ ತೆಗೆದುಕೊಂಡು ಮಾಡಿಸಿದ್ದು ನಿಜ. ಆ ಭಾಗದ ಜನರನ್ನು ಕರೆಸಿ ಇದರ ಬಗ್ಗೆ ಮಾತನಾಡಿ, ಏಕೆಂದರೆ ಇದನ್ನು ತಾವು prestige ಆಗಿ ತೆಗೆದುಕೊಳ್ಳುವುದು ಬೇಡ. 25 ಅಥವಾ 5 ಕಿ.ಮೀ. ಎಂದು ನಾವು ಕಾನೂನು ತೆಗೆದುಕೊಂಡು ಮಾತನಾಡುವುದು ಬೇಡ. ವಿದ್ಯುತ್ ಬಗ್ಗೆ ಮೂರು ದಿನ ಚರ್ಚೆಗೆ ಅವಕಾಶ ಕೊಡಿಸುತ್ತೇನೆಂದು ತಾವು ಹೇಳಿದ್ದೀರಿ. ಆದ್ದರಿಂದ, ಏನು ಬರುತ್ತದೆಯೋ ಆಮೇಲೆ ನೋಡೋಣ. ಆದರೆ, 3 ದಿನ ಚರ್ಚೆ ಮಾಡಿ ನಿಮಗೆ ಒಳ್ಳೆಯದಾಗುತ್ತದೆಂದು ನಿಮಗೆ ಸಪೋರ್ಟ್ ಮಾಡುತ್ತಿದ್ದೇವೆ. ಅಲ್ಲಿನ ವಾತಾವರಣ ಹೇಗಿದೆ ಎಂಬ ಬಗ್ಗೆ ಆ ಭಾಗ ಶಾಸಕರು ಮತ್ತು ಜನರ ಜೊತೆ ಚರ್ಚೆ ಮಾಡಿ. ಕಾನೂನು ಮತ್ತು prestige ತೆಗೆದುಕೊಳ್ಳುವುದು ಬೇಡ. ನಿಮ್ಮ ಅಧ್ಯಕ್ಷತೆಯಲ್ಲಿ ದಯಮಾಡಿ ಒಂದು ಸಭೆಯನ್ನು ಮಾಡಿ ಆ ಭಾಗದ ಜನರನ್ನು ಕರೆಸಿ ಚರ್ಚೆ ಮಾಡಿ. ಆ ಪ್ರಾಜೆಕ್ಟ್ ಆಗಬೇಕು ಮತ್ತು ಅಲ್ಲಿನ

ಜನರಿಗೂ ಸಹ ಅನುಕೂಲವಾಗುವ ರೀತಿಯಲ್ಲಿ ನಿರ್ಣಯ ಮಾಡಬೇಕೆಂದು ನಾನು ಇಂಧನ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಉಪಾಧ್ಯಕ್ಷರೆ, ಗುಂಡ್ಯಾದಲ್ಲಿ ನೀವು ಅನುಮತಿಯನ್ನು ತೆಗೆದುಕೊಳ್ಳದೆ ಪ್ರಾರಂಭ ಮಾಡಿದ್ದೀರೆಂದು ಮಾನ್ಯ ಜಯಚಂದ್ರರವರು ಪ್ರಸ್ತಾಪ ಮಾಡಿದರು. ಇವತ್ತಿನದಿವಸ ಆಗಬಾರದೆಂಬ ಕೆಲವು ವ್ಯಕ್ತಿಗಳು ರಾಜ್ಯದಲ್ಲಿ ಇದ್ದಾರೆ. ಎಲ್ಲರೂ ಇದೇ ರೀತಿಯಾಗಿದ್ದಾರೆಂದು ನಾನು ಹೇಳುವುದಿಲ್ಲ. ನಿಜಕ್ಕೂ ಪ್ರಾಮಾಣಿಕ ಪರಿಸರವಾದಿಗಳು ಸಹ ಇದ್ದಾರೆ. ಇನ್ನು ಕೆಲವರು ಡ್ಯೂಪ್ಲಿಕೇಟ್ ಪರಿಸರವಾದಿಗಳಿದ್ದಾರೆ. ಇವರು ಏನು ನಾಟಕ ಮಾಡುತ್ತಾರೆಂದರೆ, ಮಾನ್ಯ ರೇವಣ್ಣನವರು ತಿಳಿಸದಹಾಗೆ ಅವರಿಗೇನೋ ಸ್ವಲ್ಪ ನಷ್ಟವಾಗುತ್ತದೆ. ಆದ್ದರಿಂದ, ಪರಿಸರವಾದಿಗಳೆಂದು ಗುಂಪು ಮಾಡಿ ಕೊಂಡಿದ್ದಾರೆ. ಇವರಿಂದ ಏನು ಸಮಸ್ಯೆಯಾಗಿದೆ ಎಂದರೆ, ಯಾವುದೇ ಯೋಜನೆಗಳನ್ನು ಪ್ರಾರಂಭ ಮಾಡುವುದಕ್ಕೆ ಹೋದರು ಅದಕ್ಕೆ ಅಡ್ಡ ಬರುವಂತಹ ಕೆಲಸವನ್ನು ಇವರು ಮಾಡುತ್ತಿದ್ದಾರೆ.

ಶ್ರೀ ಬಿ. ರಮಾನಥ್ ರೈ: ಡ್ಯೂಪ್ಲಿಕೇಟ್ ಪರಿಸರವಾದಿಗಳು ಯಾರೆಂದು ಹೇಳಿದರೆ ನಮಗೆ ಅನುಕೂಲವಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ರೇವಣ್ಣನವರು ತಿಳಿಸಿದ ಹಾಗೆ ಈಗಾಗಲೇ ಕೇಂದ್ರ ಸರ್ಕಾರದ ಅರಣ್ಯ ಇಲಾಖೆಯಿಂದ ಪ್ರಿಲಿಮಿನರಿ ಅನುಮತಿ ಬಂದಿದೆ. ಶಿವನಸಮುದ್ರಕ್ಕೂ ಇದೇ ರೀತಿಯಾದ ನಾಟಕ ಮಾಡಿದರು. ಇದಕ್ಕೆ ತಮಿಳುನಾಡಿನವರು ಅಡ್ಡ ಬಂದು ವಿರೋಧ ಮಾಡಿದಾಗ ಮೊನ್ನೆ ದಿವಸ ನಮ್ಮ ಪ್ರಧಾನ ಕಾರ್ಯದರ್ಶಿಗಳು ದೆಹಲಿಗೆ ಹೋಗಿ ಇದಕ್ಕೂ ಕೂಡ ಪೂರ್ಣ ಅನುಮತಿಯನ್ನು ತೆಗೆದುಕೊಂಡು ಬಂದಿದ್ದಾರೆ. ನಾನು ಇಲ್ಲಿ ಉತ್ತರ ಕೊಡುವಾಗ ಅನುಮತಿ ಬಂದಿದೆ ಎಂದು ಸುಳ್ಳು ಹೇಳುವುದಕ್ಕೆ ಆಗುತ್ತದೆಯೇ? ಶ್ರೀಮತಿ ಸೋನಿಯಾ ಗಾಂಧಿಯವರು ಉದ್ಘಾಟನೆ ಮಾಡಿ ಮೂರು ವರ್ಷಗಳಾದ ಮೇಲೆ ಅನುಮತಿ ಬಂತು. ನಾವು ಮೂರು ವರ್ಷಗಳವರೆಗೆ ಕಾಯುತ್ತಾ ಕುಳಿತುಕೊಂಡಿದ್ದರೆ ಮಾನ್ಯ ರೇವಣ್ಣನವರು ತಿಳಿಸಿದ ಹಾಗೆ ಇನ್ನು ಯಾವತ್ತೋ. ವಿದ್ಯುತ್ ಬರುತ್ತಿತ್ತು. ಮಾನ್ಯ ಜೆ.ಹೆಚ್. ಪಾಟೀಲ್‌ನವರು ಉದ್ಘಾಟನೆ ಮಾಡಿ ಒಂದು ವರ್ಷವಾದ ನಂತರ ಅನುಮತಿ ಬಂತು. ನಾವು ಏಕೆ ತುರ್ತಾಗಿ ಈ ದಿಕ್ಕಿನಲ್ಲಿ ಹೋಗುತ್ತಿದ್ದೇವೆಂದರೆ, ಕರ್ನಾಟಕ ರಾಜ್ಯದಲ್ಲಿ ವಿದ್ಯುತ್‌ಗೆ ಇಷ್ಟೊಂದು ಸಮಸ್ಯೆ ಇರುವಂಥ ಸಂದರ್ಭದಲ್ಲಿ ವಿದ್ಯುತ್ ಉತ್ಪಾದನೆ

ಮಾಡಬೇಕೆಂಬ ಯೋಚನೆಯಲ್ಲಿ ನೀವೆಲ್ಲರೂ ಸಹ ಇದ್ದೀರಿ. ಜಲವಿದ್ಯುತ್‌ಗೆ ಹೆಚ್ಚಿನ ಅವಕಾಶ ಕೊಡಬೇಕು ಇಲ್ಲದಿದ್ದರೆ ಥರ್ಮಲ್‌ಗೆ ಹೆಚ್ಚಿನ ಅವಕಾಶ ಕೊಡಬೇಕೆಂದು ತಮಗೆಲ್ಲಾ ಗೊತ್ತಿದೆ. ಸಾಂಪ್ರದಾಯ ಇಂಧನಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು ಬೇಡವೆಂದು ನಾನು ಹೇಳುವುದಿಲ್ಲ. ಆದರೆ, ಇದು ಕೇವಲ ಉಪ್ಪಿನಕಾಯಿ ಇದ್ದಂತೆ. ಏಕೆಂದರೆ, ಇದರಿಂದ ಹೆಚ್ಚು ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಆಗುವುದಿಲ್ಲ. ಆದರೆ, ಇವತ್ತಿನದಿವಸ ಇದಕ್ಕೂ ಕೂಡ ಹೆಚ್ಚಿನ ಒತ್ತನ್ನು ಕೊಡುತ್ತಿದ್ದೇವೆ. ಮತ್ತೆ ಇದಕ್ಕೂ ಕೂಡ ಒತ್ತು ಕೊಡುತ್ತಿದ್ದೇವೆ. ತದಡಿ ಘಟಕಕ್ಕೆ ಸಂಬಂಧಪಟ್ಟಂತೆ ನಿಮ್ಮೆಲ್ಲರ ಜೊತೆ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಕರ್ನಾಟಕ ರಾಜ್ಯದಲ್ಲಿ ನಿಜಕ್ಕೂ ಪರಿಸರದ ಬಗ್ಗೆ ಆಸಕ್ತಿ ಇರುವವರ ಹತ್ತಿರ ನಾವು ಕುಳಿತು ಚರ್ಚೆ ಮಾಡಿ ಅವರಿಗೆ ಒಪ್ಪಿಸುತ್ತೇವೆ. ಪರಿಸರ ನಾಶ ಆಗದ ರೀತಿಯಲ್ಲಿ ನಾವು ಮಾಡುತ್ತೇವೆ. ಆದರೆ, ಪರಿಸರ ನಾಶವಾಗುತ್ತೆಂದು ಸೃಷ್ಟಿ ಮಾಡಿ ಅದರ ಲಾಭವನ್ನು ಮಾಡಿಕೊಳ್ಳುವಂಥ ಕೆಲವು ವ್ಯಕ್ತಿಗಳಿದ್ದಾರೆ. ಅವರನ್ನೂ ಕೂಡ ಈ ರಾಜ್ಯದ ಜನ ಗಮನಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಅವರು ಹೇಳುವುದನ್ನು ಒಪ್ಪುತ್ತೇನೆ. ಆದರೆ, ಇಲ್ಲಿ ಏನಾಗಿದೆ ಎಂದರೆ,

ಶ್ರೀ ವೆಂಕಟರಾವ್ ನಾಡಗೌಡ: ತಾವು ಒಂದು ಮೀಟಿಂಗ್ ಮಾಡಿ ಎಲ್ಲರನ್ನು ಕರೆದು ಈ ಬಗ್ಗೆ ಮಾತನಾಡುವಂಥ ಕೆಲಸವನ್ನಾರೂ ಮಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ: ಆಗಬಹುದು. ಸ್ಥಳೀಯ ಇಬ್ಬರು ಶಾಸಕರನ್ನು ಕರೆದು ನಾನು ಮಾತನಾಡುತ್ತೇನೆ.

ಉಪಾಧ್ಯಕ್ಷರು: ಆಯಿತು ಇದನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಅಲ್ಲಿ ಆಗಿರತಕ್ಕಂಥ ಆತಂಕವನ್ನು ನಿವಾರಿಸಬೇಕು. ಜೊತೆಗೆ ಇಲ್ಲಿ ವಿರೋಧ ಮಾಡಿರುವವರ ಖೋಟ ಪರಿಸರ ವಾದಿಗಳಿರಬಹುದು. ತಾವು ಹಿಂದೆ ನೀರಾವರಿ ಸಚಿವರಾಗಿ ಇವತ್ತು ಇಂಧನ ಸಚಿವರಾಗಿದ್ದೀರಿ. ಗುಂಡ್ಯಾದಿಂದ ಬರುವ ಕೆಲವು ಭಾಗದ ನೀರನ್ನು ತುಮಕೂರು ಜಿಲ್ಲೆಗೆ ಕೊಡಬೇಕೆನ್ನುವ ವಾದನೂ ಕೂಡ ಇದೆ. ಅಲ್ಲಿ ಪ್ರಸ್ತಾವನೆ ಇದೆ ಸ್ವಲ್ಪ ಕೇಳಿ ಸ್ವಾಮಿ.

ಶ್ರೀ ಕೆ.ಎಸ್. ಈಶ್ವರಪ್ಪ: ಅದಕ್ಕೂ ಇದಕ್ಕೂ ಏನು ಸಂಬಂಧ?

ಉಪಾಧ್ಯಕ್ಷರು: ಬೇಡ ಬೇಡ ಇದನ್ನು ಇಲ್ಲಿಗೆ ಮುಕ್ತಾಯ ಮಾಡೋಣ.

ಶ್ರೀ ಟಿ.ಬಿ. ಜಯಚಂದ್ರ: ಈಗ ನೀವು ಅವರನ್ನು ಕರೆದು ಸಮಾಧಾನ ಮಾಡಿ.

ಉಪಾಧ್ಯಕ್ಷರು: ಈಗ ಅರ್ಧಗಂಟೆ ಚರ್ಚೆಯೆ ವಿಷಯಕ್ಕೆ ಸೋಮವಾರ ಅವಕಾಶ ಕೊಡುತ್ತೇನೆ. ಏಕೆಂದರೆ ಈಗ ಸಮಯವಾಗಿದೆ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಉಪಾಧ್ಯಕ್ಷರೆ, ಅರ್ಧ ಗಂಟೆಗಳ ಕಾಲ ಚರ್ಚೆ ಮಾಡುವಂಥ ವಿಷಯಗಳು ನಾಲ್ಕು ಇವೆ. ಈಗಾಗಲೇ 8–30 ಆಗಿದೆ. 10–30ರವರೆಗೆ ನಾವು ಕುಳಿತುಕೊಳ್ಳುವುದಕ್ಕೆ ಸಿದ್ದರಿದ್ದೇವೆ. ಮೊದಲನೆಯ ವಿಚಾರ ಸುಮಾರು ಒಂದೂವರೆ ಗಂಟೆ ಹಿಡಿಯುತ್ತದೆ. ತಾವು ದಯವಿಟ್ಟು ಈ ವಿಷಯಗಳನ್ನು ಸೋಮವಾರಕ್ಕೆ ಹಾಕಿಕೊಳ್ಳಿ.

ಉಪಾಧ್ಯಕ್ಷರು: ಆಯಿತು ಸೋಮವಾರ ಕೊಡುತ್ತೇವೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ್: ಮಾನ್ಯ ಸುರೇಶ್ ಕುಮಾರ್‌ರವರೆ, ಸೋಮವಾರ ತೆಗೆದುಕೊಂಡರೂ ರಾತ್ರಿ 9 ಗಂಟೆ 10 ಗಂಟೆಯಾದರೂ ಇಲ್ಲಿ ಮಂತ್ರಿಗಳಿದ್ದು ಎಲ್ಲಾ ಚರ್ಚೆಯಾಗಲಿ. ನಾವು ಇಲ್ಲಿ ವ್ಯಕ್ತಪಡಿಸುವ ಅನಿಸಿಕೆಗಳಿಗೆ ಮಹತ್ವವೇ ಇಲ್ಲವೆಂದರೆ ಏಕೆ ಅಧಿವೇಶನ ಕರೆಯಬೇಕು? 10 ಗಂಟೆಯಾಗಲಿ ಏನು ತೊಂದರೆಯಿದೆ?

ಶ್ರೀ ಹೆಚ್.ಡಿ. ರೇವಣ್ಣ: ಇದರಲ್ಲಿ ಆರೋಗ್ಯ ಕವಚ 108 ಬಗ್ಗೆ ಆಗಬಹುದು, ಮತ್ತೊಂದು ಆಗಬಹುದು, ನನ್ನದು ನೀರಾವರಿ ವಿಷಯ, ಮಾನ್ಯ ಯೋಗೀಶ್ ಭಟ್‌ರವರು ಹಾಗೂ ಇತರ ಸದಸ್ಯರ ವಿಷಯಗಳು ಏನು ಇವೆ, ಇವೆಲ್ಲವನ್ನೂ ತಾವು ತೆಗೆದುಕೊಳ್ಳಿ ಸ್ವಾಮಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಸೋಮವಾರ ಪ್ರಶ್ನೋತ್ತರವಾದ ಕೂಡಲೇ ತೆಗೆದುಕೊಂಡು ಬಿಡಿ. ಮನಃ ಆ ದಿವಸ ರಾತ್ರಿ 9 ಗಂಟೆಗೆ ತೆಗೆದುಕೊಳ್ಳುವುದಕ್ಕೆ ಹೋಗಬೇಡಿ.

ಉಪಾಧ್ಯಕ್ಷರು: ಆಯಿತು ಸೋಮವಾರ ತೆಗೆದುಕೊಳ್ಳೋಣ. ಈಗ ಸದನವನ್ನು ನಾಳೆ ಬೆಳಗ್ಗ 10–30ಕ್ಕೆ ಸೇರುವಂತೆ ಮುಂದೂಡಲಾಗಿದೆ.

(ಸದನವು ರಾತ್ರಿ 8 ಗಂಟೆ 33 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 24ನೇ ಜುಲೈ 2009ರಂದು ಶುಕ್ರವಾರ ಬೆಳಗ್ಗೆ 10 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)